<u>**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**</u>

ಸಿಸಿ.**ನಂ. 219/2023**

| | | |
|---|---|---|
| ಸಾಕ್ಷಿಯ ಹೆಸರು | ಮಂಜುಳ | ಡಿ.ಡಬ್ಲ್ಯೂ 1 |
| ಗಂಡನ ಹೆಸರು | ನಾಗಶೆಟ್ಟಿ | |
| ವಯಸ್ಸು | 45 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಕಿತ್ತೂರು, ಗುರುವೆನಕೊಪ್ಪಲು ಗ್ರಾಮ | |

ದಿನಾಂಕಃ 16-**04**-**2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**</u>

1) ದೂರುದಾರರು ನನಗೆ ಪರಿಚಯ ಇರುವುದಿಲ್ಲ. ನನ್ನ ಗಂಡನಿಗೆ ಪರಿಚಯ ಇರುತ್ತಾರೆ. ಸುಮಾರು 4 ವರ್ಷಗಳ ಹಿಂದೆ ನನ್ನ ಗಂಡ ದೂರುದಾರರಿಂದ ರೂ. 15,000/- ಸಾಲವಾಗಿ ಪಡೆದುಕೊಂಡಿದ್ದರು. ಆ ಸಮಯದಲ್ಲಿ ನನಗೆ ಸೇರಿದ ಚೆಕ್ಕನ್ನು ನನ್ನ ಗಂಡ ದೂರುದಾರರಿಗೆ ನೀಡಿರುತ್ತಾರೆ. ನನ್ನ ಗಂಡ ನನಗೆ ನ್ಯಾಯಾಲಯದಿಂದ ಸಮನು ಬಂದ ನಂತರ ನಾನು ದೂರುದಾರರಿಗೆ ನೀಡಿರುವ ಚೆಕ್ಕಿನ ಬಾಬ್ತು ಪ್ರಕರಣ ದಾಖಲಿಸಿರುತ್ತಾರೆ ಎಂಬುದು ನನಗೆ ಗೊತ್ತಾಗಿರುತ್ತದೆ. ನಾನು ಚೆಕ್ಕಿಗೆ ಸಹಿ ಮಾಡಿರುವುದಿಲ್ಲ. ಆದ್ದರಿಂದ ನನ್ನನ್ನು ಪ್ರಕರಣದಿಂದ ಬಿಡುಗಡೆಗೊಳಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

<u>**ಪಾಟೀ ಸವಾಲುಃ**</u> ದೂರುದಾರರ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಸಿಸಿ.**ನಂ. 219/2023**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.